6)	ಸರ್ಕಸ್ ಪ್ರದರ್ಶನ	-	1
7)	ವಸ್ತು ಪ್ರದರ್ಶನಗಳು	-	9
8)	ಎಲ್.ಪಿ.ಜಿ. ದಾಸ್ತಾನುಗಳು	-	6
9)	ಸಿನಿಮಾ ಮಂದಿರಗಳು	-	44
10)	ಮನೋರಂಜನೆ ಕಾರ್ಯಕ್ರಮಗಳು	-	2

ಆ) ಅಗ್ನಿಶಾಮಕ ಸೇವೆಗಳು ನಿರ್ದೇಶಕರು ಬಹುಮಹಡಿ ಹೋಟೆಲ್ ಕಟ್ಟಡಗಳು, ಬಹುಮಹಡಿ ವಾಣಿಜ್ಯ ಸಂಕೀರ್ಣ ಕಟ್ಟಡಗಳು ಹಾಗೂ ವಸತಿ ಗೃಹಗಳು, ಪೆಟ್ರೋಲ್ :ಡೀಸೆಲ್ ಬಂಕ್‌ಗಳು, ಸೀಮೆಎಣ್ಣೆ ದಾಸ್ತಾನು, ಸರ್ಕಸ್ ಹಾಗೂ ದೊಡ್ಡ ವಸ್ತು ಪ್ರದರ್ಶನಗಳು ಎಲ್.ಪಿ.ಜಿ. ದಾಸ್ತಾನು - ಇವುಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ಮತ್ತು ಇತರೆ ಸಲಹಾ ಪತ್ರಗಳನ್ನು ನೀಡುವ ಪ್ರಾಧಿಕಾರಿಗಳಾಗಿರುತ್ತಾರೆ. ಸಂಬಂಧಪಟ್ಟ ಅಗ್ನಿಶಾಮಕ ವಿಭಾಗಾಧಿಕಾರಿಗಳು ಮತ್ತು ಠಾಣಾಧಿಕಾರಿಗಳು ಸಿನಿಮಾ ಮಂದಿರ ಮತ್ತು ಮನೋರಂಜನಾ ಕಾರ್ಯಕ್ರಮಗಳಿಗೆ ನಿರಾಕ್ಷೇಪಣಾ ಪತ್ರ ನೀಡುವ ಪ್ರಾಧಿಕಾರಿಗಳಾಗಿರುತ್ತಾರೆ.

ಇ) ಹೌದು. ಸ್ಥಳ ಪರೀಕ್ಷೆ ಮಾಡಿ ತಾಂತ್ರಿಕವಾಗಿ ಸೂಕ್ತವೆಂದು ಕಂಡು ಬಂದ ನಂತರವೇ ಪರವಾನಗಿ ನೀಡಲಾಗುತ್ತಿದೆ.

ಈ) ಇಲ್ಲ

ಬನ್ನಿಪೇಟೆ ಕ್ಷೇತ್ರದ ಬಡಾವಣೆಗಳು

2521- ಶ್ರೀ ವಿ. ಸೋಮಣ್ಣ (ಬನ್ನಿಪೇಟೆ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬನ್ನಿಪೇಟೆ ವಿಧಾನಸಭಾ ಕ್ಷೇತ್ರದಲ್ಲಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳೆಷ್ಟು?

ಆ) ಇವುಗಳಿಗೆ ಡಾಂಬರು ಹಾಗೂ ಇತರ ದುರಸ್ತಿ ಕೆಲಸಗಳನ್ನು 1994-95 ರಲ್ಲಿ ಕೈಗೊಳ್ಳಲಾಗಿದೆಯೇ?

ಇ) 1995-96ರಲ್ಲಿ ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳಿಗೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ನಿಗಧಿ ಪಡಿಸಿರುವ ಹಣದ ಪ್ರಮಾಣವೆಷ್ಟು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಬನ್ನಿಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಾಧಿಕಾರದ ಡಾ|| ಅಂಬೇಡ್ಕರ್ ಹೆಸರಿನ ಒಂದು ಬಡಾವಣೆ ಮಾತ್ರ ಇರುತ್ತದೆ.

ಆ) 1994-95ನೇ ಸಾಲಿನಲ್ಲಿ ರಸ್ತೆಗೆ ಜಲ್ಲಿ ಹಾಕುವ ಕೆಲಸಗಳನ್ನು ಮಾಡಲಾಗಿದೆ.

ಇ) ರೂ. 4.74 ಲಕ್ಷಗಳನ್ನು ಅಭಿವೃದ್ಧಿ ಕಾಮಗಾರಿಗಳಿಗಾಗಿ 1995-96ನೇ ಸಾಲಿನಲ್ಲಿ ಒದಗಿಸಲಾಗಿದೆ.

ಶೇಫ್ಗಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆಯಲ್ಲಿ ವಯೋಮಿತಿ ಮೀರುತ್ತಿರುವವರಿಗೆ ಶೇಕಡ 50-50 ಮೀಸಲಾತಿ

2407 - ಶ್ರೀ ವಿ. ಸೋಮಣ್ಣ (ಬನ್ನಿಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?